*

**ಓಎಸ್ ನಂಃ98/2010**
**ಪಿಡಬ್ಲೂಃ 3**

**<u>ಸಾಕ್ಷಿಗೆ ದಿನಾಂಕ 15-06-2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು</u>**

**<u>ಮುಖ್ಯ ವಿಚಾರಣೆ ವಾದಿ ಪರ ಶ್ರೀಮತಿ ಎಮ್.ಎಸ್.ಎಸ್. ವಕೀಲರಿಂದ</u>**

ನಾನು ನನ್ನ ಸಾಕ್ಷ್ಯವನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದ ವಿಷಯಗಳು ಸತ್ಯ ಮತ್ತು ನಿಜ ಇರುತ್ತದೆ ಆದ್ದರಿಂದ ಸದರಿ ನನ್ನ ಪ್ರಮಾಣ ಪತ್ರವನ್ನು ಮುಖ್ಯ ವಿಚಾರಣೆಯನ್ನಾಗಿ ಪರಿಗಣಿಸಬೇಕಾಗಿ ಪ್ರಾರ್ಥಿಸುತ್ತೇನೆ.

<u>ಪಾಟೀ ಸವಾಲುಃ 2ನೇ ಪ್ರತಿವಾದಿ ಪರ ಶ್ರೀ ಬಿ.ಎಮ್.ಪಿ. ವಕೀಲರಿಂದ</u>

ನನ್ನ ಮುಖ್ಯ ವಿಚಾರಣೆಯನ್ನು ತಯಾರಿಸಲು ನಾನೇ ವಕೀಲರಿಗೆ ಮಾಹಿತಿ ನೀಡಿರುತ್ತೇನೆ. ನಾನು ಚಾಲಕನಾಗಿ ಕೆಲಸ ಮಾಡುತ್ತಿದ್ದೇನೆ. ನೀವು ನಿಮ್ಮ ಮುಖ್ಯ ವಿಚಾರಣೆಯಲ್ಲಿ ವ್ಯವಸಾಯ ಮಾಡುತ್ತೀರಿ ಎಂದು ಸುಳ್ಳಾಗಿ ಬರೆಸಿದ್ದೀರಿ ಎಂದರೆ ಸಾಕ್ಷಿ ನಾನು ವ್ಯವಸಾಯ ಮತ್ತು ಚಾಲಕ ಎರಡೂ ಕೆಲಸ ಮಾಡುತ್ತೇನೆ ಎಂದು ನುಡಿಯುತ್ತಾರೆ. ನನಗೆ ಸ್ವಂತ ಜಮೀನು ಇದ್ದು ಅದರಲ್ಲಿ ನಾನು ವ್ಯವಸಾಯ ಮಾಡುತ್ತೇನೆ. ನನ್ನ ಜಮೀನಿನ ಸರ್ವೆ ನಂಬರ್ 14 ಆಗಿದ್ದು ಅದು ಚಿತ್ತಾಪುರ ಗ್ರಾಮದಲ್ಲಿದೆ. ನಾನು ಚಿತ್ತಾಪುರ ಪಟ್ಟಣದ ನಿವಾಸಿಯಾಗಿರುತ್ತೇನೆ. ನನ್ನ ಜಮೀನಿನ ಸರ್ವೆ ನಂಬರ್ 14 ಆಗಿದೆ ಎಂದು ನಾನು ದಾಖಲೆಗಳನ್ನು ಹಾಜರುಪಡಿಸಿಲ್ಲ. ನಿಮ್ಮ ಹೆಸರಿನಲ್ಲಿ ಯಾವುದೇ ಜಮೀನು ಇಲ್ಲ ಆದ ಕಾರಣ ನೀವು ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಈ ದಾವೆಯನ್ನು ಬಿಬಾನ್ ಬಿ ಯವರು ಸಲ್ಲಿಸಿದ್ದಾರೆ ಎಂದು ಮಾಹಿತಿ ಇದೆ. ನನ್ನ ಪ್ರಕಾರ ಈ ದಾವೆಯನ್ನು ಕೇವಲ ಬಿಬಾನ್ ಬಿಯವರು ತನ್ನ ಸಹೋದರರ ವಿರುದ್ಧ ಸಲ್ಲಿಸಿರುತ್ತಾರೆ. ನನಗೆ ಬಿಬಾನ್ ಬಿ ಯವರ ಸಹೋದರರ ಹೆಸರು ಗೊತ್ತಿಲ್ಲ. ನಾನು ಬಿಬಾನ್ ಬಿ ಯವರನ್ನು ನಾನು ಚಿಕ್ಕವನಾಗಿದ್ದಾಗಿನಿಂದಲೇ ಪರಿಚಯ ಇದೆ. ಅವರು ನನ್ನ ಮನೆಯ ಪಕ್ಕದಲ್ಲಿ ವಾಸವಾಗಿದ್ದರು. ನಾನು 1993ರಲ್ಲಿ ಮದುವೆ ಮಾಡಿಕೊಂಡಿರುತ್ತೇನೆ. ನಾನು ಮದುವೆ ಮಾಡಿಕೊಂಡಾಗ ನನಗೆ 20 ರಿಂದ 22 ವರ್ಷ ವಯಸ್ಸು ಆಗಿರಬಹುದು. ನನ್ನ ಮದುವೆಯು ನನ್ನ ಕುಟುಂಬದಲ್ಲಿ ಇದ್ದ ವ್ಯಕ್ತಿಗಳ ಕುಟುಂಬದಲ್ಲಿ ಆಗಿಲ್ಲ. ಹೊಸದಾಗಿ ಸಂಬಂಧ

ಆಗಿರುತ್ತದೆ. ನಿಮ್ಮ ಮುಖ್ಯ ವಿಚಾರಣೆಯಲ್ಲಿ ನಿಮ್ಮ ಅತ್ತೆ ಮತ್ತು ಬಿಬಾನ್ ಬಿ ಇವರು ಸಂಬಂಧಿಗಳು ಎಂದು ನಮೂದು ಮಾಡಿದ್ದೀರಿ ಎಂದರೆ ಸರಿ. ನಿಮ್ಮ ಮದುವೆ ಆದ ನಂತರ ಮಾತ್ರ ಬಿಬಾನ್ ಬಿ ಇವರ ಪರಿಚಯ ಆಯಿತು ಎಂದರೆ ಸಾಕ್ಷಿ ನಾವು ಒಂದೇ ರಸ್ತೆಯಲ್ಲಿ ಮನೆಯನ್ನು ಹೊಂದಿದ್ದ ಕಾರಣ ಮೊದಲಿನಿಂದಲೇ ಪರಿಚಯ ಇತ್ತು ಎಂದು ನುಡಿಯುತ್ತಾರೆ. ನನಗೆ ಬಿಬಾನ್ ಬಿ ಯವರ ಅಜ್ಜ, ಅಜ್ಜಿ, ಮತ್ತು ಆಕೆಯ ತಾಯಿಯ ಹೆಸರು ಗೊತ್ತಿಲ್ಲ. ಬಿಬಾನ್ ಬಿ ಯವರ ಗಂಡನ ಹೆಸರು ಮೆಹಬೂಬ್ ಸಾಬ್. ಮೆಹಬೂಬ್ ಸಾಬ್ ಮತ್ತು ಶೇಖ್ ಮೆಹಬೂಬ್ ಎರಡೂ ಹೆಸರುಗಳು ಬೇರೆ ಬೇರೆ ಹೆಸರುಗಳು ಎಂದರೆ ಸರಿಯಲ್ಲ. ನಾನು ನ್ಯಾಯಾಲಯಕ್ಕೆ ಬಿಬಾನ್ ಬಿ ಯವರ ಮಗ ಮಷಾಕ್ ಸಾಬ್ ಇವರು ಕರೆದ ಕಾರಣ ಬಂದಿರುತ್ತೇನೆ. ಮಷಾಕ್ ಸಾಬ್ ಈತನ ತಂದೆಯ ಹೆಸರು ಮೆಹಬೂಬ್ ಸಾಬ್. ಮಷಾಕ್ ಸಾಬ್ ಈತನ ತಂದೆಯ ಹೆಸರು ಮೆಹಬೂಬ್ ಸಾಬ್ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸಾಕ್ಷಿ ಮೆಹಬೂಬ್ ಸಾಬ್ ಮತ್ತು ಶೇಖ್ ಮೆಹಬೂಬ್ ಎರಡೂ ಹೆಸರುಗಳು ಮಷಾಕ್ ಸಾಬ್ ಈತನ ತಂದೆಯ ಹೆಸರುಗಳು ಎಂದು ನುಡಿಯುತ್ತಾರೆ. ನಾನು ಬಿಬಾನ್ ಬಿ ಯವರ ಮನೆಗೆ ಹೋಗಿ ಬಂದಿರುತ್ತೇನೆ. ನನಗೆ ಅವರ ಮನೆಯ ನಂಬರ್ ಗೊತ್ತಿಲ್ಲ. ಬಿಬಾನ್ ಬಿ ಯವರಿಗೆ ದಿಗ್ಗಾಂವ್ ಗ್ರಾಮದಲ್ಲಿ ಯಾವುದೇ ಮನೆಗಳಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ಬಿಬಾನ್ ಬಿ ಸೇರಿ ಮೆಹಬೂಬ್ ತಂದೆ ಅಹಮದ್ ಅಲಿ ಅವರ ಮನೆಗೆ ಯಾವ ದಿನಾಂಕದಂದು ಹೋಗಿದ್ದೇವೆ ಎಂದು ನನಗೀಗ ನೆನಪಿಲ್ಲ. ಮೆಹಬೂಬ್ ತಂದೆ ಅಹಮದ್ ಅಲಿ ಅವರ ಮನೆ ದಿಗ್ಗಾಂವ್ ಗ್ರಾಮದಲ್ಲಿದೆ. ನನಗೆ ಮೆಹಬೂಬ್ ತಂದೆ ಅಹಮದ್ ಅಲಿ ಅವರ ಮನೆಯಲ್ಲಿ ಏನು ಮಾತುಕತೆ ಆಗಿದೆ ಎಂದು ನೆನಪಿಲ್ಲ, ಆದರೆ ನಾವು ಹೋಗಿದ್ದು ಮಾತ್ರ ನೆನಪಿದೆ. 1ನೇ ಪ್ರತಿವಾದಿ ಬಿಬಾನ್ ಬಿ ಇವರ ತಾತನ ಮಗ. 1ನೇ ಪ್ರತಿವಾದಿ ಯಾವಾಗ ತೀರಿಕೊಂಡಿದ್ದಾನೆಂದು ನನಗೆ ಗೊತ್ತಿಲ್ಲ. ನನಗೆ 1ನೇ ಪ್ರತಿವಾದಿಯ ತಾಯಿಯ ಹೆಸರು ಗೊತ್ತಿಲ್ಲ. 1ನೇ ಪ್ರತಿವಾದಿಗೆ ದಿಗ್ಗಾಂವ್ ಗ್ರಾಮದಲ್ಲಿ ಯಾವ ಸರ್ವೆ ನಂಬರ್ ನಲ್ಲಿ ಜಾಗ ಬಂದಿತ್ತು ಎಂದು ನನಗೆ ಗೊತ್ತಿಲ್ಲ.

ಲಾಲ್ ಅಹಮದ್ ತಂದೆ ಹುಸೇನ್ ಸಾಬ್ ಈತ ಮಕ್ಕಳಿಲ್ಲದೆ ತೀರಿಕೊಂಡ ಕಾರಣ ಆತನ ಎಲ್ಲಾ ಆಸ್ತಿಗಳು 1ನೇ ಪ್ರತಿವಾದಿಗೆ ಬಂದಿದ್ದವು ಎಂದರೆ ಸರಿಯಲ್ಲ. ಬಿಬಾನ್ ಬಿ ಇವರು ಲಾಲ್ ಅಹಮದ್ ತಂದೆ ಹುಸೇನ್ ಸಾಬ್ ಈತನ ಮಗಳು ಎಂದು ತೋರಿಸಲು ದಾಖಲೆಗಳು ಇವೆಯಾ ಎಂದರೆ ಸಾಕ್ಷಿ ಆಧಾರ್ ಕಾರ್ಡ್ ಇದೆ ಆದರೆ ಅದನ್ನು

ನ್ಯಾಯಾಲಯದಲ್ಲಿ ಹಾಜರುಪಡಿಸಿಲ್ಲ ಎಂದು ನುಡಿಯುತ್ತಾರೆ. ಬಿಬಾನ್ ಬಿ ಇವರು ಲಾಲ್ ಅಹಮದ್ ತಂದೆ ಹುಸೇನ್ ಸಾಬ್ ಈತನ ಮಗಳು ಎಂದು ತೋರಿಸಲು ಯಾವುದೇ ದಾಖಲೆಗಳು ಇಲ್ಲ ಆದ ಕಾರಣ ನೀವು ಅವುಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯು ಸರ್ವೆ ನಂಬರ್ 894/3 ಎರಡು ಎಕ್ರೆ 34 ಗುಂಟೆ ಜಾಗ ಆಗಿರುತ್ತದೆ. ನನಗೆ ದಾವಾ ಆಸ್ತಿಯ ಚಕ್ ಬಂದಿ ಗೊತ್ತಿಲ್ಲ. ನೀವು ಚಿತ್ತಾಪುರದ ನಿವಾಸಿಯಾದ ಕಾರಣ 1ನೇ ಪ್ರತಿವಾದಿಯ ಕುಟುಂಬದ ಬಗ್ಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ನೀವು ಮಷಾಕ್ ಸಾಬ್ ಅವರ ಮಾತನ್ನು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಆದ ಕಾರಣ ನಿಮಗೆ ಬಿಬಾನ್ ಬಿ ಇವರ ಸಹೋದರಿಯರ ಮಾಹಿತಿ ಇಲ್ಲ ಎಂದರೆ ಸಾಕ್ಷಿ ಅವರು ತೀರಿಕೊಂಡ ಕಾರಣ ಈಗ ನೆನಪಿಲ್ಲ ಎಂದು ನುಡಿಯುತ್ತಾರೆ. ನೀವು ಮಷಾಕ್ ಸಾಬ್ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ. ಹೇ . ಕೇ. ಸರಿ ಇದೆ.

ಸಿವಿಲ್ ನ್ಯಾಯಾಧೀಶರು,
ಚಿತ್ತಾಪೂರ.